# CCE RR

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2017

**S. S. L. C. EXAMINATION, JUNE, 2017**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 22. 06. 2017 ] ಸಂಕೇತ ಸಂಖ್ಯೆ : **62-K**

Date : 22. 06. 2017 ] CODE NO. : **62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

(ಹೊಸ ಪಠ್ಯಕ್ರಮ / New Syllabus)

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 80

[ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 10 × 1 = 10 |
| 1. | ಕುಂಬ್ಳೆಯವರು 1990 ರಲ್ಲಿ ಭಾರತದ ಕ್ರಿಕೆಟ್ ತಂಡಕ್ಕೆ ಆಯ್ಕೆಯಾದರು. | |
| 2. | ಅನಿಲು ಕುಂಬ್ಳೆ ಅವರು ಕ್ರಿಕೆಟ್ ಕಲಿಯಲು ಬೆಂಗಳೂರಿನ ಯಂಗ್ ಕ್ರಿಕೆಟರ್ಸ್ ಸಂಸ್ಥೆಯನ್ನು ಸೇರಿದರು. | |
| 3. | ಅ.ರಾ. ಮಿತ್ರ ಅವರು ತಿಳಿಸಿರುವಂತೆ ರೂಢಿಯಲ್ಲಿ ಇರುವ ಶಬ್ದದ ಅರ್ಥವನ್ನು ವಿಚಿತ್ರವಾಗಿ ತಿರುಚಿ ನಾನಾರ್ಥ ಬರುವಂತೆ ಬಳಸುವುದು ಹಾಸ್ಯಗಾರರ ಲಕ್ಷಣ. | |
| 4. | ಘೋಷಣೆಗಳನ್ನು ಕೂಗುತ್ತಿದ್ದ ಸತ್ಯಾಗ್ರಹಿಗಳ ಗುಂಪನ್ನು ಚದುರಿಸಲು ಕುಲಕರ್ಣಿಯು ಗಾಳಿಯಲ್ಲಿ ಗುಂಡು ಹಾರಿಸಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 5. | ನಾ. ಕಸ್ತೂರಿಯವರು ಕಟ್ಟಿಕೊಟ್ಟಿರುವ ನವೀನ ಗಾದೆಗಳು : ಪಾಲಿಗೆ ಬಂದದ್ದು ಕೊಂಚಾಮೃತ, ಇಡ್ಲಿ ಹೊಡೆಯೋಕೆ ಕೊಡ್ಲಿ ಕೇಳಿದನಂತೆ, ಗಂಜೀಫು ಆಡೋರಿಗೆ ಗಂಜಿಯೂ ಸಿಗದು, ತಬ್ಬಲಿ ದೇವರಿಗೆ ತಂಬಿಟ್ಟೇ ನೈವೇದ್ಯ, ಬೆರಳು ತೋರಿದರೆ ಹಸ್ತ ನುಂಗುವ ಪ್ರಾಣಿ ಚೇಪುವ ತ್ರಾಣವಿಲ್ಲ. (ಯಾವುದಾದರೂ ಒಂದು ಗಾದೆ ಬರೆದರೆ ಸಾಕು) | |
| 6. | ಕೋಗಿಲೆಯು ಮಾಮರ (ಮಾವಿನ ಮರ) ದಲ್ಲಿ ಕುಳಿತು ಸುಮಧುರವಾಗಿ ಹಾಡುತ್ತಿದೆ ಎಂದು ಚೆನ್ನವೀರ ಕಣವಿಯವರು ಹೇಳಿದ್ದಾರೆ. | |
| 7. | ಅಕ್ಷರವು ನಮಗೆ ಹೊಸ ಜೀವನ ಹೊಸ ರೂಪವನ್ನು ಕೊಡುವುದರಿಂದ ಅದನ್ನು ಅಲ್ಲಾದೀನನ ಅದ್ಭುತ ಮಾಯಾ ದೀಪವೆಂದು ಕರೆದಿದ್ದಾರೆ. | |
| 8. | ಸ್ವಾತಿಯ ಮಳೆಯಿಂದ ಸಾವಿರಾರು ಕೆರೆಗಳು ತುಂಬಿ ಕುಚ್ಚಲ ಮೀನಿನಂತಹ ಜಲಚರಗಳು ಸಮೃದ್ಧವಾಗಿ ಬೆಳೆಯುತ್ತವೆ. | |
| 9. | ತನ್ನ ಕೈಯಿಂದ ದಂಡವನ್ನು ತೆರವ ಸಾಮರ್ಥ್ಯವಿರುವವನು ಮಾತ್ರ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗ ಬೇಕೆಂದು ಪುಲಿಗೆರೆ ಕವಿ ಸೋಮನು ಹೇಳಿದ್ದಾನೆ. | |
| 10. | ವಿಷಪೂರಿತ ರೊಟ್ಟಿಯನ್ನು ಕಚ್ಚಿಕೊಂಡು ಹೋಗಿದ್ದರಿಂದ ಗಿಡುಗವು ರೆಕ್ಕೆಯನ್ನು ಬಡಿದುಕೊಳ್ಳುತ್ತಾ ಧರ್ಮಪದನ ಕಣ್ಣೆದುರೇ ಸಾವನ್ನಪ್ಪಿತು. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :** (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $10 \times 2 = 20$ |
| 11. | ಮಿನಿ ಪೊಲೀಸ್ ನಗರದ ಪೊಲೀಸರು ಗೊರೂರು ರಾಮಸ್ವಾಮಿ ಅಯ್ಯಂಗಾರರನ್ನು ತನಮ್ಮ ಕಾರಿನಲ್ಲೇ ಮನೆಗೆ ಕರೆದುಕೊಂಡು ಹೋದರು. ರಾತ್ರಿಯ ಊಟದ ಸಲುವಾಗಿ ಬ್ರೆಡ್, ಹಾಲು, ಹಣ್ಣು, ಬಿಸ್ಕತ್‌ಗಳನ್ನು ನೀಡಿದರು. ಗಾಳಿ, ಬೆಳಕು ಸ್ವಚ್ಛವಾದ ಹಾಸಿಗೆ ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆ ಮಾಡುತ್ತಿದ್ದ ತಮ್ಮ ವಶದಲ್ಲೇ ಇದ್ದ ಲಾಕಪ್ಪಿನಲ್ಲಿ ಮಲಗಲು ವ್ಯವಸ್ಥೆ ಮಾಡಿಕೊಟ್ಟರು. | |
| 12. | ಮಿನಿ ಪೊಲೀಸ್ ನಗರದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರರು ನೋಡಲು ಹೋಗಿದ್ದ ಮಿತ್ರರು ದೊರೆಯಲಿಲ್ಲ. ಮಿತ್ರರ ಪರಿಚಿತರ ಮೋಟಾರು ಗಾಡಿಯಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೊರಟವರು ದಾರಿ ಮಧ್ಯದಲ್ಲೇ ಇಳಿದುಕೊಂಡರು. ನಗರದ ದೀಪಾಲಂಕಾರದ ಬೆಡಗನ್ನು ನೋಡುತ್ತಾ ದಾರಿ ತಪ್ಪಿಸಿಕೊಂಡರು. ಹೋಟೆಲ್ ಕೊಠಡಿಯಲ್ಲಿ ಉಳಿದುಕೊಳ್ಳಲು ಸಾಕಷ್ಟು ಹಣವಿರಲಿಲ್ಲ. ಚಳಿಯಿಂದ ರಕ್ಷಿಸಿಕೊಳ್ಳಲು ಬೆಚ್ಚನೆಯ ಬಟ್ಟೆಯೂ ಇರಲಿಲ್ಲ. ಅಮೇರಿಕಾದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಮಲಗಲು ಅವಕಾಶವೂ ಇರಲಿಲ್ಲ. ಮರಳಿ ಮಿತ್ರರ ಮನೆಗೆ ಹೋಗಲು ವಿಳಾಸವಿದ್ದ ಕೈಚೀಲ ಕಾರಿನಲ್ಲೇ ಉಳಿದಿತ್ತು. | |
| 13. | ಅನಿಲ್ ಕುಂಬ್ಳೆಯವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೋಲಿ ಸೇಂಟ್ ಇಂಗ್ಲಿಷ್ ಶಾಲೆಯಲ್ಲೂ ಪ್ರೌಢಶಿಕ್ಷಣವನ್ನು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿಯೂ, ಪದವೀ ಪೂರ್ವ ಶಿಕ್ಷಣವನ್ನು ನ್ಯಾಷನಲ್ ಕಾಲೇಜಿನಲ್ಲಿಯೂ ಮುಗಿಸಿದರು. ರಾಷ್ಟ್ರೀಯ ವಿದ್ಯಾಲಯ ಎಂಜಿನಿಯರಿಂಗ್ ಪದವಿಯನ್ನು 1991-92 ರಲ್ಲಿ ಉನ್ನತ ಶ್ರೇಣಿಯಲ್ಲಿ ಪಡೆದರು. | |
| 14. | ಮೊಗಲರ ಸೈನ್ಯವು ಕೆಳದಿ ಚೆನ್ನಮ್ಮನ ರಾಜ್ಯದ ಮೇಲೆ ದಾಳಿ ಮಾಡದೆ ಓಡಿ ಹೋಗಲು ಪ್ರಮುಖ ಕಾರಣ ರಾಣಿ ಚೆನ್ನಮ್ಮನ ಚಾಣಾಕ್ಷತನ. ರಾಣಿಯು ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು. ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟುದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನ್ಯವನ್ನು ನಿಲ್ಲಿಸಿ ಮೊಗಲರ ಸೇನೆಗೆ ಅನ್ನ ನೀರು ಸಿಗದಂತೆ ಮಾಡಿದಳು. ದಟ್ಟವಾದ ಕಾಡುಗಳಲ್ಲಿ ಸುರಿಯುತ್ತಿದ್ದ ಮಳೆಗೆ ತತ್ತರಿಸಿದ ಮೊಗಲರ ಸೇನೆ ಚೆನ್ನಮ್ಮನ ರಾಜ್ಯದ ಮೇಲೆ ದಾಳಿ ಮಾಡದೆ ಓಡಿ ಹೋಯಿತು. | |
| 15. | ನಾ. ಕಸ್ತೂರಿಯವರು ಅನಾರೋಗ್ಯದ ನಿಮಿತ್ತ ಒಮ್ಮೆ ವೈದ್ಯರ ಬಳಿಗೆ ಹೋಗಿದ್ದರು. ವೈದ್ಯರ ನಿರ್ದೇಶನದಂತೆ ಮಲ ಪರೀಕ್ಷೆಗಾಗಿ ಮರುದಿನ ಬೆಳಗ್ಗೆ ಡಬ್ಬಿಯಲ್ಲಿ ಮಲವನ್ನು ಸಂಗ್ರಹಿಸಿಕೊಂಡು ಆ ಡಬ್ಬಿಯ ಮೇಲೆ ಹೆಸರನ್ನು ಬರೆದುಕೊಂಡು ಹೋಗಬೇಕಿತ್ತು. ಮಲದ ಡಬ್ಬಿಯ ಮೇಲೆ 'ಕಸ್ತೂರಿ' ಎಂದು ಬರೆದುಕೊಂಡು ಹೋಗಬೇಕಲ್ಲ ಎಂಬ ಸಂಕಟವನ್ನು ತಮ್ಮ ಸ್ನೇಹಿತರ ಬಳಿ ತೋಡಿಕೊಂಡರು. | |
| 16. | ನಾವು, ನೀವು, ಅವರು, ಇವರುಗಳ ಸ್ವಭಾವ ಚಹರೆಗಳು ಬೇರೆಬೇರೆಯಾದರೂ ನಾವೆಲ್ಲರೂ ಭೂದೇವಿಯ ಬಸುರಿನಿಂದ ಜನಿಸಿದವರು. ಧರ್ಮಗಳ ಸಂಕೇತ ಬೇರೆಯಾದರೂ ಎಲ್ಲಾ ಧರ್ಮಗಳ ಸಾರ ಒಂದೇ ಆಗಿದೆ ನಾವೆಲ್ಲರೂ ಒಡಹುಟ್ಟಿದವರು ನಮ್ಮ ಜನ್ಮದಾತೆ ಒಬ್ಬಳೇ. ಭೂಮಿತಾಯಿಯ ಕುಡಿಗಳಾದ ನಾವೆಲ್ಲರೂ ಒಂದೇ ಎಂದು ಇಂದೇ ಪಣವನ್ನು ತೊಡಬೇಕೆಂದು ನಿಸಾರ್ ಅಹಮದ್ ಅವರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಸ್ವ ಸ್ವಭಾವ ಚಹರೆ ಬೇರೆಯಾದರೂ ತಾಯ ಬಸಿರು ಒಂದೇ ಕಳಸ, ಶಿಲಬೆ, ಬಿಳಿ ಮಿನಾರ್‌ಗಳೆಂದು ಧರ್ಮದ ಸಂಕೇತ ಬೇರೆಯಾದರೂ ಎಲ್ಲಾ ಧರ್ಮಗಳ ಸಾರ ಒಂದೇ. ಆಂಗ್ಲ, ಆಫ್ರಿಕನ್ನರ ಮೈಬಣ್ಣ ಬೇರೆಯಾದರೂ ಹರಿವ ನೆತ್ತರಿನ ಬಣ್ಣ ಒಂದೇ ಅಕ್ಕಿರಾಗಿಗಳ ಬಣ್ಣ ಬೇರೆಯಾದರೂ ಅವುಗಳ ಹುಲ್ಲಿನ ಬಣ್ಣ ಒಂದೇ ಬಾಣ ಬಿರುಸು. ಕುಂಡ ಹಣತೆಗಳ ಸ್ವರೂಪ ಬೇರೆಯಾದರೂ ಬೆಳಕಿನ ಸತ್ವ ಒಂದೇ ಛಂದೋ ಪ್ರಕಾರಗಳು ಬೇರೆಯಾದರೂ ಕಾವ್ಯದ ರಸಭಾವ ಒಂದೇ. ಪ್ರದೇಶಗಳು ಬೇರೆಯಾದರೂ ಭಾರತೀಯರಾದ ಎಲ್ಲರೂ ಒಂದೇ ಹೀಗೆ ಅನೇಕತೆಯಲ್ಲಿನ ಏಕತೆಯನ್ನು ಕವಿ 'ಒಂದೇ' ಪದ್ಯದಲ್ಲಿ ವರ್ಣಿಸಿದ್ದಾರೆ. | |
| 18. | ಪ್ರತಿದಿನವೂ ನಾವು ಮಾಡುವ ಒಳಿತು ಕೆಡಕು ಪಾಪ ಪುಣ್ಯಗಳ ಫಲಾಫಲಗಳನ್ನು ಲೆಕ್ಕಾಚಾರ ಮಾಡುತ್ತಾ, ಖರ್ಚು ಮಾಡುತ್ತಾ ಹೋಗಬೇಕು. ನಾವು ಮಾಡಿದ ಕಾರ್ಯಗಳಲ್ಲಿನ ಧರ್ಮ ಅಧರ್ಮಗಳನ್ನು ಬೇರೆಬೇರೆಯಾಗಿ ವಿಂಗಡಿಸಬೇಕು. ಕೆಟ್ಟ ನಡತೆಗೆ ಕಾರಣವಾದ ಅಧರ್ಮದ ಬೇರನ್ನು ಬುಡಸಹಿತ ಕತ್ತರಿಸಿ ಹಾಕಬೇಕು. ಪರಿಶುದ್ಧವಾದ ನಡವಳಿಕೆಯನ್ನು ರೂಢಿಸಿಕೊಂಡು ದೈಹಿಕ ಆಸೆಗಳನ್ನು ಹಿಡಿತದಲ್ಲಿಸಿಕೊಂಡು. ಮನಸ್ಸನ್ನು ಅಂಕೆಯಲ್ಲಿರಿಸಿಕೊಂಡು ಪರಮಾತ್ಮನನ್ನು ಕಾಣುವ ದಿಕ್ಕಿನಲ್ಲಿ ಸಾಗಬೇಕು. ಇದು ಪುರಂದರದಾಸರು ಮನಸ್ಸನ್ನು ಶುದ್ಧವಾಗಿಡಲು ತಿಳಿಸಿರುವ ಮಾರ್ಗಗಳು. | |
| 19. | ಪಾಪ ಪುಣ್ಯಗಳನ್ನು ಪ್ರತಿನಿತ್ಯವ್ಯಯ ಮಾಡುತ್ತಾ ಅಧರ್ಮದ ನರವನ್ನು ಕತ್ತರಿಸಿ ಹಾಕಬೇಕು. ತನುಮನಗಳನ್ನು ಹಿಡಿತದಲ್ಲಿರಿಸಿಕೊಂಡು ಪರಿಶುದ್ಧವಾದ ಮನಸ್ಸಿನಿಂದ ಭಗವಂತನನ್ನು ಧ್ಯಾನಿಸಬೇಕು. ಇದರ ಫಲವಾಗಿ ನಮ್ಮನ್ನು ನಾವು ಅರಿತುಕೊಳ್ಳುವ ಜಾಣ್ಮೆಯು ತಾನಾಗಿಯೇ ಬರುತ್ತದೆ. ಅರಿವೇ ಗುರುವಾಗಿ ಮುಕ್ತಿಯ ಮಾರ್ಗ ಕೇವಲ ಒಂದು ಗೇಣಿನ ಅಂತರವಾಗುತ್ತದೆ. | |
| 20. | ಇಪ್ಪತ್ತು ಕಿಲೋಮೀಟರು ಪ್ರಯಾಣಿಸುವ ಹೊತ್ತಿಗೆ ಒಂದು ಕಡೆ ನೋಡು ನೋಡುತ್ತಿದ್ದಂತೆ ರಸ್ತೆಗೆ ಅಡ್ಡವಾಗಿ ಎಳೆಯಲಾಗಿದ್ದ ವಿದ್ಯುತ್ ತಂತಿಗಳು ತಲೆಗೆ ಹತ್ತಿರದಲ್ಲಿಯೇ ಹಾದು ಹೋಗಿದ್ದವು. ಮೈಮರೆತು ಕುಳಿತಿದ್ದ ಈರಪ್ಪ ಎಂ. ಕಂಬಳಿಯವರಿಗೆ ಸಾವೇ ಭುಜ ಸವರಿಕೊಂಡು ಹೋದಂತಹ ಅನುಭವವಾಯಿತು. ದಿಗ್ಗನೆ ಟಾಪಿಗೆ ಒರಗಿದರು. ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಗಿ, ಹೃದಯವೇ ಕಿತ್ತು ಬಾಯಿಗೆ ಬಂದಾಂತಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಸಂದರ್ಭಸಹಿತ ವಿವರಣೆ :** | 2 × 3 = 6 |
| | ಕೃತಿ–ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 21. | *"ದೇವಿ ನನ್ನ ಅಪರಾಧವನ್ನು ಕ್ಷಮಿಸು"*<br>ಈ ಮೇಲಿನ ಮಾತನ್ನು ಶ್ರೀಮತಿ ವಿಜಯಲಕ್ಷ್ಮೀ ಬಾಳೇಕುಂದ್ರಿಯವರು ಬರೆದಿರುವ 'ಜೀವನಧಾರೆ' ಕೃತಿಯಿಂದ ಆಯ್ಕೆ ಮಾಡಿಕೊಂಡಿರುವ 'ಕರ್ನಾಟಕದ ವೀರ ವನಿತೆಯರು' ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>ಈಶ ಪ್ರಭುವಿನ ಸಾವಿನಿಂದ ರಾಣಿ ಮಲ್ಲಮ್ಮಾಜಿ ದುಃಖ ತಪ್ತಳಾಗುತ್ತಾಳೆ. ಗಂಡನಿಗೆ ಕೊಟ್ಟ ಮಾತನ್ನು ನೆರವೇರಿಸಲು ಹಾಗೂ ಸಂಸ್ಥಾನದ ಈ ಸ್ಥಿತಿಗೆ ಕಾರಣನಾದ ಶಿವಾಜಿಯನ್ನು ಮಣಿಸಲು ಮುಂದಾಗುತ್ತಾಳೆ. ತನ್ನ ಶಕ್ತಿ ಮತ್ತು ಯುಕ್ತಿಯನ್ನು ಬಳಸಿ ಸರದಾರ ಶಾಂತಯ್ಯನ ಮೂಲಕ ಶಿವಾಜಿಯು ಸಿದ್ಧ ಸಮುದ್ರಕ್ಕೆ ಬರುವಂತೆ ಮಾಡಿ. ಮಾರ್ಗಮಧ್ಯದಲ್ಲೇ ಹಠಾತ್ತನೆ ದಾಳಿ ಮಾಡಿ ಶಿವಾಜಿಯು ತಲ್ಲಣಗೊಳ್ಳುವಂತೆ ಮಾಡಿದಳು. ಮಿಂಚಿನಂತೆ ಎರಗಿದ ಚೆನ್ನಮ್ಮನ ದಾಳಿಗೆ ತತ್ತರಿಸಿದ ಶಿವಾಜಿಯು ಕುದುರೆಯಿಂದ ಇಳಿದು ಕ್ಷಮೆಯನ್ನು ಯಾಚಿಸುತ್ತಾ ಅಪರಾಧವನ್ನು ಮನ್ನಿಸಿ ಮಗನೆಂದು ತಿಳಿಯುವಂತೆ ಬೇಡಿಕೊಂಡನು. ಶಿವಾಜಿಯೇ ಶರಣಾಗಿ ಸ್ನೇಹವನ್ನು ಅರಸುವಂತೆ ಮಾಡಿದ ಮಲ್ಲಮ್ಮಾಜಿಯ ಧೈರ್ಯ ಮತ್ತು ಸಾಹಸವನ್ನು ನಾವಿಲ್ಲಿ ಕಾಣಬಹುದು. | |
| 22. | *"ಗೋಡೆಗೆ ಕಪ್ಪ ಬಳಿದ್ಹಂಗೆ"*<br>ಅಜ್ಞಾತ ಕವಿಗಳಿಂದ ರಚಿತವಾಗಿರುವ ಜನಪದ ಗೀತೆಗಳಿಂದ ಆಯ್ದುಕೊಂಡಿರುವ 'ಜಾನಪದ' ಎಂಬ ಪದ್ಯದಿಂದ ಈ ಮೇಲಿನ ನುಡಿಯನ್ನು ಆರಿಸಿಕೊಳ್ಳಲಾಗಿದೆ.<br>ರೈತರ ಪ್ರಧಾನ ಕಸುಬು ವ್ಯವಸಾಯ ಬೇಸಾಯಕ್ಕೆ ಮಳೆಯೇ ಆಧಾರ ಮಳೆಯಿಲ್ಲದಿದ್ದರೆ ಅವರ ಬದುಕು ಬರಡಾಗುತ್ತದೆ. ಮಳೆಗೆ ಕಾರಣವಾದ ಕರಿ ಬಣ್ಣದ ಮುಗಿಲನ್ನು ಕಂಡಾಗ ರೈತರಿಗೆ ಎಲ್ಲಿಲ್ಲದ ಸಂಭ್ರಮ, ಸಂತಸ ಮೂಡಣ ದಿಕ್ಕಿನಲ್ಲಿ ಮೂಡಿದ ಮೋಡದ ಚಂದವನ್ನು ಎಷ್ಟು ವರ್ಣಿಸಿದರೂ ಅವರಿಗೆ ಸಾಲದು. ಗೋಡೆಗೆ ಕಪ್ಪು ಬಳಿದ ಹಾಗೆ ಎದ್ದು ಕಾಣುತ್ತಿರುವ ಮೋಡ, ಮುಗಿಲಿನಿಂದ ಕೇಳಿ ಬರುತ್ತಿರುವ ಮಳೆಯ ಆರ್ಭಟದಿಂದ ಆನಂದಗೊಂಡ ಜನಪದದ ಭಾವನೆಗಳು ಕಲ್ಪನೆಗಳು ಈ ಗೀತೆಯಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 23. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ಅಕ್ಷರವೆಂಬುದು ಅಲ್ಲಾದೀನನ<br>ಅದ್ಭುತ ಮಾಯಾದೀಪ<br>ಅದು ವಶವಾದರೆ ನಿನಗೆ ನೀಡುವುದು<br>ಹೊಸ ಜೀವನ ಹೊಸ ರೂಪ ॥<br>**ಅಥವಾ**<br>ದೀಪ ಉಜ್ಜಿದರೆ ಅವತರಿಸುವನು<br>ಸರ್ವಶಕ್ತ ದೂತ<br>ಅವನ ಬೆನ್ನೇರಿ ನೀ ಸಂಚರಿಸುವೆ<br>ಬ್ರಹ್ಮಾಂಡ ಸಮಸ್ತ ॥ | 1 × 3 = 3 |
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 24. | *ಜಿ.ಪಿ. ರಾಜರತ್ನಂ :*<br>ಜಿ.ಪಿ. ರಾಜರತ್ನಂ ಅವರು ಡಿಸೆಂಬರ್ 5, 1908 ರಲ್ಲಿ ಹಿಂದೆ ಕ್ಲೋಸ್ ಪೇಟೆ ಎಂದು ಕರೆಯುತ್ತಿದ್ದ ರಾಮನಗರ ಜಿಲ್ಲೆಯ ಈಗಿನ ರಾಮನಗರದಲ್ಲಿ ಜನಿಸಿದರು. ಇವರ ಪ್ರಮುಖ ಕೃತಿಗಳು. 'ರತ್ನನ ಪದಗಳು', 'ನಾಗನ ಪದಗಳು', 'ಗೌತಮ ಬುದ್ಧ', 'ಏಸುಕ್ರಿಸ್ತ', 'ಗಂಡುಗೊಡಲಿ', 'ವಿಚಾರ ರಶ್ಮಿ' ಭಾಗ – 1 ಮತ್ತು 'ವಿಚಾರ ರಶ್ಮಿ' ಭಾಗ – 2 ಮುಂತಾದವು. | |
| 25. | *ಚೆನ್ನವೀರ ಕಣವಿ :*<br>ಚೆನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳದವರು. ಜೂನ್ 28, 1928 ರಲ್ಲಿ ಜನಿಸಿದರು. 'ಆಕಾಶಬುಟ್ಟಿ', 'ಜೀವನಧ್ವನಿ', 'ಮಣ್ಣಿನ ಮೆರವಣಿಗೆ', 'ನೆಲಮುಗಿಲು', 'ಸಮತೋಲನ', 'ಕಾವ್ಯಾನು ಸಂಧಾನ', 'ಹೂವು ಹೊರಳುವವು ಸೂರ್ಯನ ಕಡೆಗೆ' ಮುಂತಾದವು ಇವರ ಕೃತಿಗಳು.<br>*ಸೂಚನೆ :* ಇವರಿಂದ ರಚಿತವಾದ ಇತರ ಕೃತಿಗಳನ್ನು ಬರೆದಿದ್ದರೂ ಅಂಕ ನೀಡುವುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು : | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 26. | ರಾಮಸಿಂಗನನ್ನು ಗುಂಡಿಕ್ಕಿಕೊಂದ ಕುಲಕರ್ಣಿಯ ಹೀನ ಕೃತ್ಯವನ್ನು ಸೋಮಣ್ಣ ಖಂಡಿಸುತ್ತಾನೆ. ಸಣ್ಣ ಕಂದನನ್ನು ಕೊಲ್ಲಲು ಹೇಗೆ ತಾನೆ ನಿಮಗೆ ಕೈಬಂದಿತೆಂದು ಪ್ರಶ್ನಿಸುತ್ತಾನೆ. ಭಾರತ ಮಾತೆಯ ಬಂಧ ವಿಮೋಚನೆಗೆ ಗಟ್ಟಿಯಾಗಿ ನಿಂತರೆ ಅದು ಹಟವೇ, ದುಶ್ಚಟಗಳಿಂದ ದೂರಾಗಿರೆಂದು ಆಜ್ಞೆ ಮಾಡಿರಿ, ಜನಕ್ಕೆ ಸ್ವಚ್ಛತೆಯ ಪಾಠ ಕಲಿಸಿರಿ. ಅಜ್ಞಾನವನ್ನು ದೂರ ಮಾಡಿ ಜ್ಞಾನ ಜ್ಯೋತಿಯನ್ನು ಬೆಳಗಿಸಿರಿ ನಿಮ್ಮ ಆಜ್ಞೆಯನ್ನು ಪಾಲಿಸುತ್ತೇವೆ. ಭಾರತ ಮಾತೆಯ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹಂಬಲಿಸುವ ನಮಗೆ, ಪಾರತಂತ್ರ್ಯದ ಕೆಸರಿನಲ್ಲಿ ಕೊಳೆಯುವಂತೆ ಆಜ್ಞೆ ಮಾಡಬೇಡಿ ಅದು ಉನ್ಮತ್ತ ಗುಲಾಮರ ಉಪಧ್ವ್ಯಾಪ ದಾನವನದರ್ಪ. ದಾಸ್ಯದ ದ್ಯೋತಕವದು. ದೇಶದ ಸ್ವಾತಂತ್ರ್ಯ ಹೋರಾಟವು ಲಾಭ. ಹಾನಿಗಳ ವ್ಯಾಪಾರವಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸತ್ತರೆ ನಮ್ಮ ಮುಂದಿನ ಪೀಳಿಗೆಯವರು ಅದರ ಫಲವನ್ನು ಸವಿಯುತ್ತಾರೆ. ಕರ್ತವ್ಯದಲ್ಲಿ ಚ್ಯುತಿಯಾದಂತೆ ನರಕಕ್ಕೆ ಹೋಗುವುದು ಖಂಡಿತ. ಗೇಣು ಹೊಟ್ಟೆಗಾಗಿ ದೇಶದ ಕಂದಮ್ಮರನ್ನು ಕೊಂದು ಅವರ ರಕ್ತದ ಮಡುವಿನಲ್ಲಿ ಮೆರೆಯುವುದು ಕರ್ತವ್ಯ ನಿಷ್ಠೆಯೇ ? ದಿಕ್ಕಾರವಿರಲಿ ನಿಮ್ಮ ಬದುಕಿಗೆ ಶತಧಿಕ್ಕಾರ ಎಂದು ಕುಲಕರ್ಣಿಯ ಕೃತ್ಯವನ್ನು ಸೋಮಣ್ಣನು ವಿರೋಧಿಸಿದನು.<br><br>*ಅಥವಾ*<br><br>ರಾಮಸಿಂಗ್ ಮೋಹನಪುರದ ಉತ್ಸಾಹೀ ತರುಣ. ಆತನ ತಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದವನು. ತಾಯಿ ತುಳಜಾಬಾಯಿ ಪತಿಯನ್ನು ಕಳೆದುಕೊಂಡಿದ್ದರೂ ಇದ್ದೊಬ್ಬ ಮಗನನ್ನು ಆಶೀರ್ವದಿಸಿ ಮೋಹನಪುರದ ಹೋರಾಟಕ್ಕೆ ಶುಭಕೋರಿ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವವನ್ನು ವಹಿಸಲು ಕಳುಹಿಸಿಕೊಡುತ್ತಾರೆ. ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ಬಲಿ ಕೊಡಲು ಸಿದ್ಧಳಾಗುತ್ತಾಳೆ. ದೇಶಕ್ಕಾಗಿ ತನ್ನ ಸರ್ವಸ್ವವನ್ನು ಕಳೆದುಕೊಳ್ಳಲು ಆಕೆ ಸಿದ್ಧಳಾಗುತ್ತಾಳೆ. ಹಾಗಾಗಿಯೇ ಮಗನು ಸಾವನಪ್ಪಿದರೂ ಲೆಕ್ಕಸದೆ ಮಗನ ಕೈಗೆ ಮತ್ತೊಂದು ಧ್ವಜವನ್ನು ಕೊಡಲು ಮುಂದಾಗುತ್ತಾಳೆ. ಕುಲಕರ್ಣಿಯ ಆಜ್ಞೆಯನ್ನು ದಿಟ್ಟತನದಿಂದ ದಿಕ್ಕರಿಸುತ್ತಾಳೆ.<br><br>ಇಲಾಖೆಯ ಅಧಿಕಾರಿಗಳ ಆಜ್ಞೆಯನ್ನು ಲೆಕ್ಕಿಸದೆ ರಾಮಸಿಂಗ್ ಸ್ವಾತಂತ್ರ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹೋರಾಟಕ್ಕೆ ಸರ್ವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾನೆ. ದಂಗೆಯನ್ನು ಹತ್ತಿಕ್ಕಲು ಪೊಲೀಸರ ದೊಡ್ಡ ಪಡೆ ಬಂದರೂ ಹೆದರದೆ ಸ್ವಯಂ ಸೇವಕರ ಪಡೆಯನ್ನು ಮುನ್ನೆಡೆಸುತ್ತಾನೆ. ಜಯಕಾರವನ್ನು ಕೂಗುತ್ತಾ ಶಿಪಾಯಿಗಳ ಆಜ್ಞೆಯನ್ನು ಧಿಕ್ಕರಿಸುತ್ತಾನೆ. ಕುಲಕರ್ಣಿಯಂತಹ ಅಧಿಕಾರಿಗಳನ್ನು ಕವಡಿ ಕಿಮ್ಮತ್ತಿನ ಗುಲಮರೆಂದು ಕರೆಯುವುದರ ಜೊತೆಗೆ ಅವರನ್ನು ಮಣಿಸಲು ನನ್ನಂತಹ ದೇಶಾಭಿಮಾನಿ ಹುಡುಗನೊಬ್ಬ ಸಾಕೆಂದು ಕುಲಕರ್ಣಿಯನ್ನು ಕೆರಳಿಸುತ್ತಾನೆ. ಕುಲಕರ್ಣಿಯು ಬಂದೂಕನ್ನು ತೋರಿಸಿ ಬೆದರಿಸಿದಾಗ ತನ್ನ ಕೈಯಲ್ಲಿ ಹಿಡಿದಿದ್ದ ಧ್ವಜವನ್ನು ತೋರಿಸುತ್ತಾ ಧ್ವಜದ ಶಕ್ತಿ ಮತ್ತು ಭಕ್ತಿಯನ್ನು ಎತ್ತಿ ಹಿಡಿಯುತ್ತಾನೆ. 'ಮಾಡು ಇಲ್ಲವೆ ಮಡಿ' ಗಾಂಧೀಜಿ ಕೊಟ್ಟ ಮಂತ್ರ ಈ ದೇಹದಲ್ಲಿ ಪ್ರಾಣಿವಿರುವವರೆಗೂ ಧ್ವಜವನ್ನು ಕೆಳಗೆ ಇಡುವುದಿಲ್ಲ. ಹೋರಾಟವನ್ನು ನಿಲ್ಲಿಸುವುದೂ ಇಲ್ಲ. ಮೋಹನಪುರದ ಒಂದು ಪಿಳ್ಳೆ ಜೀವಂತವಿರುವವರೆಗೂ ನಿಮ್ಮ ಆಜ್ಞೆ ನಡೆಯುವುದಿಲ್ಲ ಎಂಬ ಸಂದೇಶವನ್ನು ಸ್ಪಷ್ಟಪಡಿಸುತ್ತಾನೆ. ಸಭೆ ಸೇರಿಯೇ ತೀರುತ್ತೇನೆ ಎಂದು ಘೋಷಣೆಗಳನ್ನು ಕೂಗುತ್ತಾ ಸತ್ಯಾಗ್ರಹಿಗಳ ದಂಡನ್ನು ಮುನ್ನೆಡೆಸುತ್ತಾನೆ. ಸಭೆಯನ್ನು ಚದುರಿಸಲು ಗಾಳಿಯಲ್ಲಿ ಹಾರಿಸಿದ ಗುಂಡಿಗೂ ಬೆದರದೆ ಭಾರತ ಮಾತಾಕೀ ಜೈ ಎಂದು ಮುನ್ನುಗ್ಗಿ ಕುಲಕರ್ಣಿಯ ಗುಂಡಿಗೆ ಬಲಿಯಾಗಿ ರಾಮಸಿಂಗ್ ಹುತಾತ್ಮನಾಗುತ್ತಾನೆ. | |
| 27. | ಲೌಕಿಕ ಆಸಕ್ತಿಯನ್ನು ಮುಳುಗಿರುವ ಮನುಷ್ಯನ ಬಯಕೆಗಳಿಗೆ ಮಿತಿಯೇ ಇಲ್ಲ ಬಡವ ಬಲ್ಲಿದ ಎಂಬ ಭೇದ ಭಾವವಿಲ್ಲದೆ ಎಲ್ಲರನ್ನೂ ಬೆನ್ನುಹತ್ತಿ ಕಾಡುತ್ತಿದೆ ಬಯಕೆಗಳು. ಈ ಬಯಕೆಗಳ ಈಡೇರಿಕೆಯೇ ಚಿಂತೆಯಾಗಿ ಪರಿವರ್ತನೆಯಾಗುತ್ತದೆ. ಬಡವರ ಪ್ರಾಥಮಿಕ ಬೇಡಿಕೆ ಹೊಟ್ಟೆಯನ್ನು ತುಂಬಿಸಿಕೊಳ್ಳುವುದು. ಬಡವರಿಗೆ ಊಟದ ಸಲುವಾಗಿ ಆಹಾರವನ್ನು ಪೂರೈಸಿಕೊಳ್ಳುವ ಚಿಂತೆ ಊಟದ ಯೋಚನೆ ಇಲ್ಲದವರಿಗೆ ಉಡುವ ತೊಡುವ ಬಯಕೆ ಅದು ನೆರವೇರಿದ ಮೇಲೆ ಸಂಪತ್ತನ್ನು ಸಂಗ್ರಹಿಸುವ ಚಿಂತೆ ಕಾಡುತ್ತದೆ. ಸಾಕಷ್ಟು ಸಂಪತ್ತು ಸಂಗ್ರಹವಾದ ಮೇಲೆ ಬಾಳಸಂಗತಿಯನ್ನು ಪಡೆಯಲು ಮದುವೆಯಾಗಬೇಕು ಎಂಬ ಚಿಂತೆ. ಹೆಂಡತಿಯು ಬಂದನಂತರ ಮಕ್ಕಳನ್ನು ಪಡೆದು ಸಂಸಾರವನ್ನು ಹಿಗ್ಗಿಸುವ ಚಿಂತೆ. ಮಕ್ಕಳು ಆದ ಮೇಲೆ ಇಲ್ಲಿಯವರೆಗೆ ಸಂಪಾದಿಸಿದ ಎಲ್ಲಾವನ್ನೂ ರಕ್ಷಿಸಿಕೊಳ್ಳುವ ಚಿಂತೆ ಎಲ್ಲಿ ಕೇಡಾಗುವುದೋ ಯಾವ ರೀತಿಯ ವಿಪತ್ತನ್ನು ಎದುರಿಸಬೇಕಾಗುವುದೋ ಕಳ್ಳಕಾಕರು, ಅನಾರೋಗ್ಯ, ಸುತ್ತಲಿನವರಿಂದ ತೊಡಕುಗಳು ಎಲ್ಲಿ ಸಂಭವಿಸುವುದೋ ಎಂಬ ಚಿಂತೆ. ಕೊನೆಗೆ ತನ್ನ ಅವಸಾನ ಎಂದು ಹೇಗಾಗುವುದು ಎಂದು ಹುಟ್ಟಿನಿಂದ ಸಾಯುವವರೆಗೂ ಮನುಷ್ಯನನ್ನು ಚಿಂತೆಗಳು ಬಿಡದೆ ಕಾಡುತ್ತವೆ ಎಂದು ವಚನಗಳಲ್ಲಿ ಮನೋಜ್ಞವಾಗಿ ಚಿತ್ರಿಸಲಾಗಿದೆ. | |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಲೌಕಿಕ ಬಯಕೆಗಳ ಚಿಂತೆಯಲ್ಲಿ ಮುಳುಗಿರುವ ಮನುಷ್ಯ ಆತ್ಮೋದ್ಧಾರದ ಕಡೆಗೆ ಮನಸ್ಸನ್ನು ಕೊಡುವುದೇ ಇಲ್ಲ. ಇಹದ ಚಿಂತೆಯಲ್ಲಿ ಪರ ಚಿಂತೆಯನ್ನು ಮಾಡುವುದೇ ಇಲ್ಲಿ ತನ್ನ ಬೇಕು ಬೇಡಗಳ ಚಿಂತೆಯಲ್ಲಿ ಎಲ್ಲದಕ್ಕೂ ಕಾರಣನಾದ ಭಗವಂತನನ್ನು ಪೂರ್ಣವಾಗಿ ಮರೆತು ಬಿಟ್ಟಿದ್ದಾನೆ. ಸದಾ ಬದುಕಿನ ಬವಣೆಯಲ್ಲಿ ಮುಳುಗಿ ತೊಳಲಾಡುತ್ತಿದ್ದಾನೆ. ಹುಟ್ಟಿನಿಂದ ಸಾಯುವವರೆಗೂ ಬಯಕೆಗಳ ಈಡೇರಿಕೆಯಲ್ಲಿ ನಿರತನಾಗಿ ಶಿವನ ಚಿಂತೆಯನ್ನು ಪೂರ್ಣವಾಗಿ ಮರೆತಿದ್ದಾನೆ. ಬಡವ ಬಲ್ಲಿದ ಎನ್ನದೆ ಎಲ್ಲಾ ಹಂತದಲ್ಲೂ ಚಿಂತೆಯು ಕಾಡುತ್ತಿದೆ. ಬಡವರಿಗೆ ಊಟದ ಚಿಂತೆ, ಉಣ್ಣಲು ಇದ್ದವರಿಗೆ ಉಡುವ ತೊಡುವ ಚಿಂತೆ. ಸಂಪತ್ತಿನ ಚಿಂತೆ ಕೂಡಿಟ್ಟ ಮೇಲೆ ಮದುವೆ. ಹೆಂಡತಿ ಮಕ್ಕಳ ಚಿಂತೆ. ಎಲ್ಲವೂ ಆದ ಮೇಲೆ ಅಲ್ಲಿ ಕೇಡಾಗುವುದೋ ಎಂಬ ಚಿಂತೆ. ಕೊನೆಗೆ ಎಂತಹ ವಿಪತ್ತು ಬಂದು ಎದುರಾಗುವುದೋ ತನ್ನ ಅವಸಾನ ಹೇಗಾಗುವುದೋ ಎಂಬ ಚಿಂತೆ ಹೀಗೆ ಚಿಂತೆಯಲ್ಲಿ ಮುಳುಗಿದ ಮನುಷ್ಯ ಶಿವನನ್ನು ಸಂಪೂರ್ಣವಾಗಿ ಮರೆತೇ ಬಿಟ್ಟಿದ್ದಾನೆ. ಅವನಿಗೆ ದೇವರ ಬಗೆಗೆ ಚಿಂತಿಸಲು ಸಮಯವೇ ಇಲ್ಲದಂತಾಗಿದೆ. ಇದರಿಂದಾಗಿ ಶಿವನ ಬಗೆಗೆ ಚಿಂತಿಸುವವರನ್ನು ಕಾಣಲು ಸಾಧ್ಯವೇ ಆಗುತ್ತಿಲ್ಲ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $12 \times 1 = 12$ |
| 28. | (ಡಿ) ಬೌಲರ್ | |
| 29. | (ಸಿ) 34 | |
| 30. | (ಎ) ಭೂಮಿ + ಅಲ್ಲಿ | |
| 31. | (ಬಿ) ಇರುಳು | |
| 32. | (ಬಿ) ಕರ್ನಾಟಕವನ್ನು | |
| 33. | (ಸಿ) ಪಟಪಟ | |
| 34. | (ಡಿ) ಮಿಶ್ರವಾಕ್ಯ | |
| 35. | (ಬಿ) ನಿತ್ಯ | |
| 36. | (ಎ) ಭಾವಸೂಚಕ | |
| 37. | (ಬಿ) ಸಂತತಿ | |
| 38. | (ಎ) ಗಂಗಾ | |
| 39. | (ಸಿ) ಮತ್ತೆಮತ್ತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 4 × 1 = 4 |
| 40. | ಮಣ್ಣು, ನೀರು, ಬೆಂಕಿ, ಗಾಳಿ ಮತ್ತು ಆಕಾಶ ಇವು ಪಂಚಭೂತಗಳು. | |
| 41. | ಆಕಾಶ ಎಂದರೆ ನಾವು ನಮ್ಮ ತಲೆಯ ಮೇಲೆ ಕಾಣುವ ಗಗನದಲ್ಲಿ ಸೃಷ್ಟಿಯಲ್ಲಿ ನಾವು ಏನೇನು ಕಾಣುತ್ತೇವೋ ಅದಕ್ಕೆಲ್ಲಾ ಇರುವುದಕ್ಕೆ ಅವಕಾಶವನ್ನು ಒದಗಿಸುವ ಅಂತರಿಕ್ಷ ( Space ) ಇದು ಆಕಾಶ. | |
| 42. | ಶಬ್ಧ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ಈ ಐದು ಪಂಚಭೂತಗಳಿಗೆ ಸಂಬಂಧಿಸಿದ ಗುಣಗಳು. | |
| 43. | ಮನಸ್ಸಿಗೂ ಮಾತಿಗೂ ನಿಲುಕದ ಭಗವಂತನು ಪಂಚಭೂತಗಳಿಗೆ ಸಂಬಂಧಿಸಿದ ಐದು ಗುಣಗಳನ್ನೂ ಮೀರಿದವನು. ಆದ್ದರಿಂದಲೇ ಅವನು ಗುಣಾತೀತ. | |
| 44. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 46. | ಪ್ರಬಂಧ ಬರೆವಣಿಗೆ : | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |